# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 16-07-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಸಂದೀಪ್.ಎಸ್, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
4. ಶ್ರೀಮತಿ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ,
5. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು, ಬಾಣಸವಾಡಿ,
6. ಶ್ರೀ ಅಪ್ಪಯ್ಯ ಗೌಡ, ಸ್ಥಳೀಯರು, ಬಾಣಸವಾಡಿ,
7. ಶ್ರೀ ಶ್ರೀರಾಮ್, ಸ್ಥಳೀಯರು, ಬಾಣಸವಾಡಿ,
8. ಶ್ರೀ ಕಾರ್ತಿಕ್ ಶೆಟ್ಟಿ, ಸ್ಥಳೀಯರು, ಬಾಣಸವಾಡಿ,
9. ಶ್ರೀ ಕ್ರಿಸ್ಟೋಫರ್ ಕೂರ್ರುಘ್, ಸ್ಥಳೀಯರು, ಬಾಣಸವಾಡಿ,

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಎಂ.ನಾರಾಯಣಸ್ವಾಮಿ, ಕಂದಾಯ ಪರಿವೀಕ್ಷಕರು,
2. ಶ್ರೀ ಎನ್.ಸಿ ಸುಧೀಂದ್ರ, ಕಂದಾಯ ಪರಿವೀಕ್ಷಕರು,
3. ಶ್ರೀ ರಾಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀ ವೆಂಕಟೇಶ್, ತೋಟಗಾರಿಕಾ ಇಲಾಖೆ,
5. ಡಾ॥ ರೇಚಲ್ ಎಸ್ ಡ್ಯಾನಿಯಲ್, ಆರೋಗ್ಯ ವೈದ್ಯಾಧಿಕಾರಿಗಳು
6. ಶ್ರೀ ಆನಂದ್, ಕಿರಿಯ ಆರೋಗ್ಯ ನಿರೀಕ್ಷಕರು,
7. ಶ್ರೀ ಕೆ.ಎ ಭೋಗೇಶ್, ಮಾರ್ಷಲ್
8. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,
9. ಶ್ರೀ ದವಲ್, ಸಹಾಯಕ ಅಭಿಯಂತರರು, (ಬಿಡಬ್ಲ್ಯೂ.ಎಸ್.ಎಸ್.ಬಿ)
10. ಶ್ರೀ ಕೆ.ಎಸ್.ರವೀಂದ್ರನಾಥ್, ಅರಣ್ಯ ಇಲಾಖೆ.

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಹಾಗೂ ವಾರ್ಡಿನ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು:-**

1) **ಶ್ರೀ ಕ್ರಿಸ್ಟೋಫರ್ ಕೂರ್ರುಘ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ** ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್ ನಲ್ಲಿ ರಸ್ತೆಯ ಇಕ್ಕೆಲಗಳಲ್ಲಿರುವ ಮರಗಳಿಂದ ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಬೀದಿ ದೀಪಗಳ ಕಂಬಗಳಿಗೆ ಹಾಗೂ ಸಿಸಿ ಕ್ಯಾಮೆರಾಗಳಿಗೆ ಅಡ್ಡಲಾಗಿ ಇರುವುದರಿಂದ ಬೀದಿ ದೀಪಗಳ ಬೆಳಕು ರಸ್ತೆಗೆ ಬೀಳದೇ ಕ್ಯಾಮೆರಾದಲ್ಲಿ ಸಹ ಸರಿಯಾಗಿ ಸೆರೆಯಾಗುತ್ತಿರುವುದಿಲ್ಲ, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ರಸ್ತೆ ಬದಿಯಲ್ಲಿರುವ ಮರಗಳನ್ನು ಟ್ರಿಮ್ ಮಾಡಿ, ಸದರಿ ಸ್ಥಳದಿಂದ ಕೂಡಲೇ ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ರಸ್ತೆಗಳಲ್ಲಿರುವ ಮರಗಳನ್ನು ಟ್ರಿಮ್ ಮಾಡಿ, ವಾರ್ಡಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದಾಗ, ಅರಣ್ಯ

ಇಲಾಖೆಯ ಅಧಿಕಾರಿಗಳು ಮಾತನಾಡಿ, ಅತೀ ಶೀಘ್ರವಾಗಿ ವಾರ್ಡ್ ವ್ಯಾಪ್ತಿಯ ರಸ್ತೆಗಳ ಇಕ್ಕೆಲಗಳಲ್ಲಿ ಇರುವ ಮರದ ಕೊಂಬೆ ರೆಂಬೆಗಳನ್ನು ಟ್ರಿಮ್ ಮಾಡಲು ಕ್ರಮ ವಹಿಸಲಾಗುವುದಾಗಿ ಸಭೆಗೆ ತಿಳಿಸಿದರು.

2) ಅಬ್ಬಯ್ಯ ಗೌಡ, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ 5ನೇ ಮುಖ್ಯರಸ್ತೆ, ಚನ್ನಸಂದ್ರ, ರಸ್ತೆಯ ಎರಡೂ ಕಡೆಗಳಲ್ಲಿರುವ ಚರಂಡಿಗಳಲ್ಲಿ ಹೂಳು ತುಂಬಿದ್ದು, ಇದರಿಂದ ಮಳೆಯ ನೀರು ರಸ್ತೆಗೆ ಹರಿಯುತ್ತಿರುವುದು ಕಂಡುಬಂದಿದ್ದು, ಈ ಸ್ಥಳಗಳಲ್ಲಿರುವ ಚರಂಡಿಯ ಹೂಳನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದಾಗ, ಸಹಾಯಕ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ವ್ಯಾಪ್ತಿಗೆ ಒಳಪಡುತ್ತಿದ್ದು, ಸದರಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲು ಸಭೆಗೆ ತಿಳಿಸಲಾಯಿತು.

3) ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮದ ಅಧಿಕಾರಿ ನೌಕರರು ಪ್ರತಿ ಮಾಹೆಯಲ್ಲಿ ತಿಂಗಳು ಮುಗಿದ ಒಂದು ವಾರದ ನಂತರ ಮೀಟರ್ ರೀಡಿಂಗ್ ತೆಗೆದುಕೊಳ್ಳುತ್ತಿದ್ದು, ಇದರಿಂದ ಹೆಚ್ಚಿನ ಶುಲ್ಕ ಬರುತ್ತಿರುವುದಾಗಿ, ಹಾಗೂ ಪ್ರತಿ ಮಾಹೆಯಲ್ಲಿ ತಿಂಗಳು ಮುಗಿದ ಕೂಡಲೇ ರೀಡಿಂಗ್ ತೆಗೆದುಕೊಳ್ಳಲು ಕ್ರಮ ವಹಿಸಲು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮದ ಅಧಿಕಾರಿಗಳು ಮಾತನಾಡಿ, ಕೆಲವು ಸಂದರ್ಭದಲ್ಲಿ ಮೀಟರ್ ರೀಡರ್ ರಜೆಗೆ ತೆರಳಿದ ಸಂದರ್ಭದಲ್ಲಿ ತಡವಾಗಿ ಮೀಟರ್ ರೀಡಿಂಗ್ ತೆಗೆದುಕೊಳ್ಳುವ ಸಾಧ್ಯತೆ ಇದ್ದು, ಮುಂದೆ ಸರಿಪಡಿಸಲು ಕ್ರಮ ವಹಿಸಲಾಗುವುದೆಂದು ಸಬೆಗೆ ತಿಳಿಸಿದರು.

4) ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್, 2ನೇ ಬ್ಲಾಕ್, 5ನೇ ಸಿ ಮುಖ್ಯರಸ್ತೆಯಲ್ಲಿ ರಸ್ತೆಗುಂಡಿಗಳು ಬಿದ್ದಿದ್ದು ಇದನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಹಾಯಕ ಅಭಿಯಂತರರು ಪ್ರಸ್ತುತ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಯು ಪಾಲಿಕೆ ವತಿಯಿಂದ ನಿರ್ವಹಿಸುತ್ತಿದ್ದು, ಶೀಘ್ರವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

5) ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಎಲ್ಲಾ ರಸ್ತೆಗಳಲ್ಲಿ ಕಸ ಕಡ್ಡಿ ಹಾಗೂ ಇತರೆ ತ್ಯಾಜ್ಯವನ್ನು ಎಲ್ಲಂದರಲ್ಲಿ ಹಾಗೆ ಉಳಿಸಿದ್ದು, ಇದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು, ಇದನ್ನು ಪ್ರತಿ ನಿತ್ಯ ಕಡ್ಡಾಯವಾಗಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದಾಗ ಕೆಲವು ಪ್ರದೇಶಗಳಲ್ಲಿ ಕಸ ಸಂಗ್ರಹಣೆ ಹಾಗೂ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಕಷ್ಟಕರವಾಗಿದ್ದು, ಮುಂದಿನ ದಿನಗಳಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ, ಕಸ ಗುಡಿಸುವಿಕೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

6) ಶ್ರೀಮತಿ/ಶ್ರೀ ಅಂಜು ಮಿನಾಸ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ನನ್ನ ಮನೆಯ ಎದುರುಗಡೆ ಇರುವ ಖಾಲಿ ನಿವೇಶನದಲ್ಲಿ ನಿವೇಶನದ ಸುತ್ತಮುತ್ತಲಿನ ಮನೆಯ ನಿವಾಸಿಗಳು ಕಸ ಹಾಗೂ ಕಟ್ಟಡದ ತ್ಯಾಜ್ಯವನ್ನು ಎಸೆಯುತ್ತಿದ್ದು, ಇದರಿಂದ ಸೊಳ್ಳೆ ಹಾಗೂ ಕ್ರಿಮಿ ಕೀಟಗಳು ಹೆಚ್ಚಾಗಿ, ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನನ್ನ ಮನೆಯ ಎದುರುಗಡೆ ಇರುವ ಖಾಲಿ ನಿವೇಶನದಲ್ಲಿರುವ ತ್ಯಾಜ್ಯ ಹಾಗೂ ಕಸವನ್ನು ಸಮರ್ಪಕವಾಗಿ ತೆರವುಗೊಳಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಖಾಲಿ ನಿವೇಶನದಲ್ಲಿ ಹಾಕಿರುವ ತ್ಯಾಜ್ಯವನ್ನು ತೆರವುಗೊಳಿಸಲು ಕ್ರಮ ವಹಿಸಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

7) ಶ್ರೀ ಅಮಿತ್ ನಿಗ್ಗಿ, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡ್ ಕಮಿಟಿ ಸಭೆಯ ದಿನಾಂಕವನ್ನು ಹಿಂದಿನ ದಿನ ತಿಳಿಸಿದ್ದು, ಮುಂದಿನ ಸಭೆಯ ಬಗ್ಗೆ ಮುಂಚಿತವಾಗಿ ಮಾಹಿತಿಯನ್ನು ನೀಡಲು ಸಭೆಗೆ ತಿಳಿಸಿದರು ಹಾಗೂ ಹಿಂದಿನ ಸಭೆಯಲ್ಲಿ ಸಂಚಾರ ಪೊಲೀಸರು ಹಾಗೂ ಬೆಸ್ಕಾಂ ಅಧಿಕಾರಿಗಳು ಗೈರು ಹಾಜರಿಯಾಗಿದ್ದು, ಇಂದಿನ ಸಭೆಯಲ್ಲಿಯೂ ಸಹ ಗೈರು ಹಾಜರಾಗಿರುತ್ತಾರೆ. ಇದರಿಂದ ವಾರ್ಡ್ ಮಟ್ಟದಲ್ಲಿ ಉಲ್ಬಣವಾಗುವ ಕುಂದು ಕೊರತೆಗಳನ್ನು ಬಗೆಹರಿಸಲು ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ ಮುಂದಿನ ವಾರ್ಡ್ ಕಮಿಟಿ ಸಭೆಗೆ ಪೋಲೀಸ್ ಇನ್ಸ್‌ಪೆಕ್ಟರ್ (ಸಂಚಾರ) ಹಾಗೂ ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಲು ಕ್ರಮವಹಿಸಲು ತಿಳಿಸಿದಾಗ, ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

8) ಡಾ॥ ರೇಚಲ್ ಎಸ್ ಡ್ಯಾನಿಯಲ್, ಆರೋಗ್ಯ ವೈದ್ಯಾಧಿಕಾರಿಗಳು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿಗೆ ಸಂಬಂಧಿಸಿದಂತೆ ಬೂಸ್ಟರ್ ಡೋಸ್ ಅನ್ನು ದೊಡ್ಡ ಬಾಣಸವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಮಯ ಬೆಳಿಗ್ಗೆ 10-00 ರಿಂದ ಮದ್ಯಾಹ್ನ 1-00 ಗಂಟೆಯ ವರೆಗೆ ಉಚಿತವಾಗಿ ನೀಡುತ್ತಿದ್ದು, ನಾಗರೀಕರು ಲಸಿಕೆಯನ್ನು ಬೂಸ್ಟರ್ ಡೋಸ್ ಲಸಿಕೆಯನ್ನು ಪಡೆದುಕೊಳ್ಳಲು ಸಭೆಗೆ ತಿಳಿಸಿದರು.

9) ಶ್ರೀ ರಾಮಚಂದ್ರ, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯ 6ನೇ ಬಿ ಕ್ರಾಸ್‌ನಲ್ಲಿ ಮರಗಳಿಗೆ ಹಾಗೂ ಎಲ್ಲಂದರಲ್ಲಿ ಓವರ್ ಹೆಡ್ ಕೇಬಲ್‌ಗಳನ್ನು ಅಳವಡಿಸಿದ್ದು, ಈ ಕೇಬಲ್‌ಗಳಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇವುಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಓವರ್‌ಹೆಡ್ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಸೂಚಿಸಿದರು.

10) ವಾರ್ಡ್ ವ್ಯಾಪ್ತಿಯ 8ನೇ ಮುಖ್ಯರಸ್ತೆಯಲ್ಲಿ ಎರಡು ಬೀದಿ ದೀಪಗಳು ಉರಿಯದೇ ಇರುವುದರಿಂದ ರಾತ್ರಿ ಸಮಯದಲ್ಲಿ ಕಳ್ಳತನಗಳು ಹೆಚ್ಚಾಗುವ ಸಂಭವ ಇರುವುದರಿಂದ ಸದರಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ಸದರಿ ಪ್ರದೇಶದಲ್ಲಿ ಬೆಸ್ಕಾಂ ಇಲಾಖೆಯವರಿಗೆ ಬೀದಿ ದೀಪಗಳನ್ನು ಅಳವಡಿಸಲು ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.

11) ಶ್ರೀ ಕ್ರಿಸ್ಟೋಫರ್ ಕ್ರೂಝ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಚಾಯ್ ಶಾಪ್, 7ನೇ ಮುಖ್ಯರಸ್ತೆ, 4ನೇ ಬಿ ಅಡ್ಡರಸ್ತೆ, ಎನ್‌ಕ್ಲೋ ಎದುರು ಹಾಗೂ ಡಿ ಗ್ರಾಂಡೆ ಹೋಟೆಲ್ ಮುಂಭಾಗದ ಪಾದಾಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಸದರಿ ಸ್ಥಳಗಳಲ್ಲಿ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರಿಗೆ ತಿಳಿಸಿದರು.

12) ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್, 1ನೇ ಸಿ ಮತ್ತು 1ನೇ ಬಿ ಅಡ್ಡರಸ್ತೆಗಳಲ್ಲಿ ರಸ್ತೆಯು ತುಂಬಾ ಹಾಳಾಗಿದ್ದು, ಈ ರಸ್ತೆಗಳಲ್ಲಿ ಹೊಸದಾಗಿ ಡಾಂಬರೀಕರಣ ಮಾಡಲು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ 2021-22ನೇ ಸಾಲಿನ ನವ ನಗರೋತ್ಥಾನ ಅನುದಾನದ ಅಡಿಯಲ್ಲಿ ಈಗಾಗಲೇ ಸದರಿ ರಸ್ತೆಗಳನ್ನು ತೆಗೆದುಕೊಂಡಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ರಸ್ತೆ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸುವುದಾಗಿ ಸಭೆಗೆ ತಿಳಿಸಲಾಯಿತು.

13) ಶ್ರೀ ದೀಪಕ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ 1ನೇ ಬ್ಲಾಕ್ ಹಾಗೂ 3ನೇ ಬಿ ಅಡ್ಡರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿದ್ದು, ಇದರಿಂದ ಮಳೆಯ ನೀರು ಸರಾಗವಾಗಿ ಹರಿಯದೇ ರಸ್ತೆಗೆ ಹರಿಯುತ್ತಿದ್ದು, ಕೂಡಲೇ ಚರಂಡಿಯ ಹೂಳನ್ನು ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ 2022-23ನೇ ಸಾಲಿನ ಮಳೆ ಪ್ರವಾಹ ತಡೆಗಟ್ಟುವಿಕೆ ಹಾಗೂ ಮುನ್ನೆಚ್ಚರಿಕೆಗೆ ಸಂಬಂಧಿಸಿದ ಕಾಮಗಾರಿಗಳ ಅನುದಾನದ ಅಡಿಯಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಹಾಗೂ ಕಾರ್ಯಾದೇಶ ನೀಡುವ ಹಂತದಲ್ಲಿದ್ದು, ಕಾರ್ಯಾದೇಶ ನೀಡಿದ ತಕ್ಷಣ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಲಾಯಿತು.

14) ಶ್ರೀ ಅಮಿತ್ ನಿಗ್ಗಿ, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಹಾಳಾಗಿರುವ ಕಲ್ವರ್ಟ್‌ಗಳನ್ನು ನಿರ್ಮಾಣ ಮಾಡುವ ಕಾಮಗಾರಿಗೆ ಅನುಮೋದನೆಯಾಗಿದ್ದು, ಈವರೆವಿಗೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸದರಿ ಕಾಮಗಾರಿಗೆ ಈಗಾಗಲೇ ಕಾರ್ಯಾದೇಶ ನೀಡುವ ಹಂತದಲ್ಲಿದ್ದು, ಕಾರ್ಯಾದೇಶ ನೀಡಿದ ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

15) ಶ್ರೀ ಕ್ರಿಸ್ಟೋಫರ್ ಕ್ರೂಝ್, ಸ್ಥಳೀಯರು, ಬಾಣಸವಾಡಿ, ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಸರ್ವೆ ನಂ.211 ರಲ್ಲಿರುವ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿದ್ದ ಶ್ರೀ ಶ್ರೀಧರ್, ಸ್ಥಳೀಯರು ಮಾತನಾಡಿ ಪ್ರಸ್ತಾಪಿತ ವಿಷಯವು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಯಲದ ತೀರ್ಪು ಬಂದ ಕೂಡಲೇ ಕ್ರಮ ವಹಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಕೆರೆ ಅಭಿವೃದ್ಧಿ ಇಲಾಖೆಯ ಅಧಿಕಾರಿ / ನೌಕರರು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| 18/7/2022<br>ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ.27, ಬಾಣಸವಾಡಿ | 18/7/22<br>ಅಧ್ಯಕ್ಷರು<br>(ನೋಡೆಲ್ ಅಧಿಕಾರಿಗಳು)<br>ವಾರ್ಡ್ ಸಂಖ್ಯೆ.27, ಬಾಣಸವಾಡಿ |

ಪ್ರತಿಯನ್ನು

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಅಧಿಕಾರಿಗಳಿಗೆ/ಕಛೇರಿ ಕಡತಕ್ಕೆ.
6) ಸಂಚಾರ ಪೊಲೀಸ್ ಇನ್ಸ್‌ಪೆಕ್ಟರ್ ವಾರ್ಡ್ ಸಂಖ್ಯೆ:27 ರವರಿಗೆ ಸಲ್ಲಿಸುತ್ತಾ, ಮುಂದಿನ ಸಭೆಗೆ ಹಾಜರಾಗಲು ಕೋರಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ವಾರ್ಡ್ ಸಂಖ್ಯೆ:27 ರವರಿಗೆ ಸಲ್ಲಿಸುತ್ತಾ, ಮುಂದಿನ ಸಭೆಗೆ ಹಾಜರಾಗಲು ಕೋರಿದೆ.